**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಎಸ್.ಸಿ.87/2022**

**ದಿನಾಂಕಃ 15.07.2025**

**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 7 (ಚಾ.ಸಾ. 4)**

| | | |
|---|---|---|
| **ಹೆಸರು** | **ಃ** | **ಶಿವಕುಮಾರ್** |
| **ತಂದೆಯ ಹೆಸರು** | **ಃ** | **ಭೀರಪ್ಪ** |
| **ವಯಸ್ಸು** | **ಃ** | **40 ವರ್ಷ** |
| **ಉದ್ಯೋಗ** | **ಃ** | **ಗಾರೆ ಕೆಲಸ** |
| **ವಾಸ ಸ್ಥಳ** | **ಃ** | **ಕರೇಕಲ್ಲುದೊಡ್ಡಿ, ರಾಮನಗರ ತಾಲ್ಲೂಕು.** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನನ್ನನ್ನು ಪೊಲೀಸರು ಸ್ಥಳ ಪಂಚನಾಮೆಗೆ ಮತ್ತು ಅಮಾನತ್ತು ಪಂಚನಾಮೆಗೆ ಎಲ್ಲಿಯೂ ಕರೆದುಕೊಂಡು ಹೋಗಿಲ್ಲ. ಸೌಮ್ಯಳಿಗೆ ಹಲ್ಲೆ ಆದ ಜಾಗದಲ್ಲಿ ಅಂದರೆ ಆರೋಪಿಯ ಮನೆಗೆ ಪೊಲೀಸರು ನನ್ನನ್ನು ಕರೆದುಕೊಂಡು ಹೋಗಿಲ್ಲ ಮತ್ತು ಅಲ್ಲಿ ಯಾವುದೇ ದಾಖಲೆಗಳನ್ನು ನನಗೆ ತೋರಿಸಿಲ್ಲ. ಪೊಲೀಸರು ನನಗೆ ಇಲ್ಲಿ ಹಾಜರುಪಡಿಸಿರುವ ಫೊಟೋಗಳನ್ನು ಮತ್ತು ಲಗ್ನ ಪತ್ರಿಕೆಯನ್ನು ನನಗೆ ತೋರಿಸಿಲ್ಲ. ಸಾಕ್ಷಿಗೆ ನಿಪಿ **5** ಮಹಜರ್ ನ್ನು ತೋರಿಸಲಾಗಿ ಅದರಲ್ಲಿ ಅವರ ರುಜುವನ್ನು ಗುರುತಿಸಿದ್ದಾರೆ. ಆ ರುಜುವನ್ನು **ನಿಪಿ 5ಬಿ** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಚಾಕು ಮತ್ತು ಎರಡು ದೊಣ್ಣೆಗಳನ್ನು ನಾನು ನೋಡಿಲ್ಲ.

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

**2.** ದಿಃ**10.06.2022** ರಂದು ಪೊಲೀಸರು ದೂರುದಾರರ ಮನೆ ಹತ್ತಿರ ತನಿಖೆ ಬಂದಿದ್ದು ದೂರುದಾರರು ಸ್ಥಳ ತೋರಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ದೂರುದಾರರು ಪೊಲೀಸರಿಗೆ ಅವರ ಆಹ್ವಾನ ಪತ್ರಿಕೆ, ಮದುವೆಯ ಫೋಟೋಗಳು, ಅವರ ಗಂಡ ಹೊಡೆಯಲು ಉಪಯೋಗಿಸಿದ ದೊಣ್ಣೆಗಳು ಮತ್ತು ಚಾಕುವನ್ನು ಪೊಲೀಸರಿಗೆ ಕೊಟ್ಟರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಮತ್ತು ಉಮಾ ಎನ್ನುವ ಸಾಕ್ಷಿದಾರರು ಆ ಸ್ಥಳದಲ್ಲಿ ಇದ್ದೆವು ಎಂದರೆ ಸರಿಯಲ್ಲ. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ **2** ದೊಣ್ಣೆಗಳು ಮತ್ತು ಚಾಕುವನ್ನು ತೋರಿಸಿ ಅವುಗಳನ್ನೇ ಪೊಲೀಸರು ವಶಪಡಿಸಿಕೊಂಡಿರುವುದು ಎನ್ನುವುದಕ್ಕೆ ಇಲ್ಲವೆಂದು ಉತ್ತರಿಸಿದ್ದಾರೆ. ಸ್ಥಳದಲ್ಲಿ ಪೊಲೀಸರು ಆ ವಸ್ತುಗಳನ್ನು ವಶಪಡಿಸಿಕೊಂಡು ಮಧ್ಯಾಹ್ನ **03.00** ಗಂಟೆಯಿಂದ **04.00** ಗಂಟೆಯವರೆಗೆ ಮಹಜರ್ ನ್ನು ಮಾಡಿದರು, ಆಗ ನಾನು ಮತ್ತು ಉಮಾ ಆ ಮಹಜರ್ ಗೆ ರುಜು ಹಾಕಿದ್ದೆವು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದಾರೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ರಾಮನಗರ.**